OS No.18 /2018 PW-1

**<u>ದಿನಾಂಕ 12.10.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃ</u>**

ನಾನು ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ನೋಟರೀಕೃತ ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದೇನೆ ಸದರಿ ದಾಖಲೆಯು ತಹಶೀಲ್ದಾರವರು ನೀಡಿದ ದಾಖಲೆ ಆಗಿರದ ಕಾರಣ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರನ್ನು ಹೇಳಿರುತ್ತಾರೆ ಆದ್ದರಿಂದ ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಅದನ್ನು ನಿಪಿ-1 ಎಂದು, 5 ಕೈ ಬರಹದ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-2 ರಿಂದ ನಿಪಿ-6 ಎಂದು, 2 ಕಂಪ್ಯೂಟರ್ ಪಹಣಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-7 ಮತ್ತು ನಿಪಿ-8 ಎಂದು, 1 ಕೈ ಬರಹದ ಎಂ ಆರ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, 2 ಕಂಪ್ಯೂಟರ್ ಎಂ ಆರ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-10 ಮತ್ತು ನಿಪಿ-11 ಎಂದು, ಸಂಜೀವಮ್ಮರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, ದಿಃ09.08.2017 ರ ವಿಭಾಗ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು, 2 ಇಸಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-14 ಮತ್ತು ನಿಪಿ-15 ಎಂದು, ಎಂ ಆರ್ 19/83-84 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯಿತು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಓ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.